


International Journal of Kannada Research
www.kannadajournal.com

ISSN: 2454–5813
IJSR 2016; 2(4): 176-177
© 2016 IJKS
www.kannadajournal.com
Received: 13-08-2016
Accepted: 19-09-2016

**ಡಾ.ಬಾಳಪ್ಪ ಎಬಿ**
ಪ್ರಾಧ್ಯಾಪಕರು, ಕನ್ನಡ ವಿಭಾಗ,
ಇಎಂಎಸ್ ಸರ್ಕಾರಿ ಪ್ರಥಮ
ದರ್ಜೆ ಕಾಲೇಜು, ಹುಳಿಯಾರು,
ತುಮಕೂರು, ಕರ್ನಾಟಕ, ಭಾರತ

**Corresponding Auhtor:**
**ಡಾ.ಬಾಳಪ್ಪ ಎಬಿ**
ಪ್ರಾಧ್ಯಾಪಕರು, ಕನ್ನಡ ವಿಭಾಗ,
ಇಎಂಎಸ್ ಸರ್ಕಾರಿ ಪ್ರಥಮ
ದರ್ಜೆ ಕಾಲೇಜು, ಹುಳಿಯಾರು,
ತುಮಕೂರು, ಕರ್ನಾಟಕ, ಭಾರತ

# ತುರುವೇಕೆರೆ ತಾಮ್ರಶಾಸನದಲ್ಲಿ ಕಲ್ಯಾಣದ ಮಹಾತ್ಮೆ

**ಡಾ.ಬಾಳಪ್ಪ ಎಬಿ**

**ಪೀಠಿಕೆ**
ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ 12 ನೇ ಶತಮಾನವು ಮಹತ್ವಪೂರ್ಣ ಕಾಲಘಟ್ಟ. ಕಾರಣಗಳು ಹಲವು. ಆದರೂ ಸಮಾಜಕ್ಕೆ ಅಂಟಿಕೊಂಡಿದ್ದ 'ಸ್ಥಾವರತ್ವ' ಅಳಿಸುವ 'ಜಂಗಮತ್ವ' ಪ್ರತಿಷ್ಠಾಪಿಸುವ ಧ್ಯೇಯವನ್ನು ಕಲ್ಯಾಣವು ಗರ್ಭೀಕರಿಸಿಕೊಂಡಿತ್ತು. ಎಲ್ಲೆಡೆಯಲ್ಲಿದ್ದ ಶರಣರನ್ನು ಕೈಬೀಸಿ ಆಕರ್ಷಿಸಿಕೊಂಡು ಅನುಭವ ಮಂಟಪವನ್ನು ಕಟ್ಟಿತು. ಶೂನ್ಯಸಿಂಹಾಸನಾಧಿಪತಿಯಾಗಿ ಹಿರಿಯ ಜ್ಞಾನಿ ಹಾಗೂ ವಿರಕ್ತನಾದ ಅಲ್ಲಮನನ್ನು ನೇಮಿಸಿತು. ಆಗ ಕಲ್ಯಾಣವು ಹಲವು ಸಾಮಾಜಿಕ ಸಮಸ್ಯೆಗಳನ್ನು ಚರ್ಚಿಸಲು ಮುಕ್ತವೇದಿಕೆಯಾಗಿತ್ತು. ತುಳಿತಕ್ಕೊಳಗಾದವರ ಅಥವಾ ಹೂತುಹೋದವರ ಬದುಕನ್ನು ಸಮಾಜಮುಖಿಯಾಗಿಸಿದ ಕೀರ್ತಿ ಕಲ್ಯಾಣಕ್ಕೆ ಮತ್ತು ಕಲ್ಯಾಣದಲ್ಲಿದ್ದ ಶರಣರಿಗೆ ಸಲ್ಲುತ್ತದೆ.

## ಕಲ್ಯಾಣದ ಮಹಾತ್ಮೆ
ಚಾಲುಕ್ಯರ ರಾಜನಾದ ಬಿಜ್ಜಳನ ರಾಜಧಾನಿ ಕಲ್ಯಾಣ. ಕಲ್ಯಾಣವೆಂಬುದು ಸ್ಥಳನಾಮವಾಗಿರದೆ ಸರ್ವಜನರ ಸರ್ವಕಾಲೀನ ಅಭ್ಯುದಯ ಬಯಸುವ ತತ್ವವಾಗಿಯೂ ಅನ್ವರ್ಥವಾಗಿದೆ. ಕರ್ನಾಟಕದಲ್ಲಿ ಕಟ್ಟುತ್ತ ಬಂದ ಕಲ್ಯಾಣಗಳಿಗೆ ಈ ಕಾರಣಕ್ಕಾಗೆ ಒಂದು ಪರಂಪರೆಯಿದೆ. ಇದಕ್ಕೋಸ್ಕರ ನಮ್ಮ ಕನ್ನಡ ಕಾವ್ಯಗಳಲ್ಲಿ ' ಸಮಯ ಕಲ್ಯಾಣ, ವಿಜಯ ಕಲ್ಯಾಣ, ಅಮರ ಕಲ್ಯಾಣ, ಧರ್ಮ ಕಲ್ಯಾಣ ಹಾಗೂ ಕಡೆಯ ಕಲ್ಯಾಣಗಳು ಹುಟ್ಟಿಕೊಂಡಿವೆ. ಹನ್ನೆರಡನೇ ಶತಮಾನದ ಬಸವಕಲ್ಯಾಣವನ್ನು ಸಮಯ ಕಲ್ಯಾಣ ಎನ್ನಲಾಗುತ್ತದೆ. ಪ್ರೌಢದೇವರಾಯನ ಕಾಲದ ಕಲ್ಯಾಣಕ್ಕೆ ವಿಜಯ ಕಲ್ಯಾಣವೆಂಬ ಹೆಸರಿದೆ. ದಿಗ್ಗಿಯ ಸಂಗಮನಾಥನ ಕಲ್ಯಾಣವು ಅಮರ ಕಲ್ಯಾಣವೆನಿಸಿದೆ. ನಾಗಾವಿಯದು ಧರ್ಮ ಕಲ್ಯಾಣವಾದರೆ, ಕೊಡೆಕಲ್ಲಿನದು ಕಡೆಯ ಕಲ್ಯಾಣವಾಗಿದೆ. ಇವುಗಳಲ್ಲದೆ ತುರುವೇಕೆರೆಯ ತಾಮ್ರಶಾಸನದಲ್ಲಿ ಈ ಕಲ್ಯಾಣಕ್ಕೆ ವಿಭಿನ್ನ ಹೆಸರುಗಳಿದ್ದು ತನ್ನದೇ ಮಹತ್ವ ಪಡೆದುಕೊಂಡಿದೆ.
ತುಮಕೂರು ಜಿಲ್ಲೆಯ ಹತ್ತು ತಾಲೂಕುಗಳಲ್ಲಿ ತುರುವೇಕೆರೆಯೂ ಒಂದು. ಇದರ ಕೇಂದ್ರ ಸ್ಥಳದಲ್ಲಿ ಕುರುಬರ ರೇವಣಸಿದ್ದೇಶ್ವರ ದೇವಸ್ಥಾನವಿದೆ. ಒಡೆಯರುಗಳ ಪಾರುಪತ್ಯದಲ್ಲಿರುವ ಈ ದೇವಸ್ಥಾನದಲ್ಲಿ ಮೂರು ತಾಮ್ರಶಾಸನಗಳು ದೊರೆಯುತ್ತವೆ. ಮೂರು ತಾಮ್ರಶಾಸನಗಳಲ್ಲಿ ಹಲವು ತಾಮ್ರಪತ್ರಗಳು ಇದ್ದು ಒಂದೊಂದು ಪತ್ರವೂ ಹಲವು ಮಹತ್ವದ ಸಂಗತಿಗಳ ಮೇಲೆ ಬೆಳಕು ಚೆಲ್ಲುತ್ತವೆ. ಒಂದನೇ ಶಾಸನದಲ್ಲಿ ಮೂರು ತಾಮ್ರ ಪತ್ರಗಳಿದ್ದು, ಇವುಗಳಲ್ಲಿ ಮೊದಲೆರಡು ಮುಂಭಾಗ ಹಿಂಭಾಗದಿಂದ ಕೂಡಿದ್ದರೆ, ಮೂರನೇ ಪತ್ರದಲ್ಲಿ ಮುಂಭಾಗ ಮಾತ್ರವಿದೆ. ಎರಡನೇ ತಾಮ್ರ ಶಾಸನದಲ್ಲಿ ನಾಲ್ಕು ತಾಮ್ರಪತ್ರಗಳಿದ್ದು ಎಲ್ಲವೂ ಮುಂಭಾಗ ಮತ್ತು ಹಿಂಭಾಗದಿಂದ ಕೂಡಿರುತ್ತವೆ. ಮೂರನೇ ತಾಮ್ರಶಾಸನದಲ್ಲಿ ಐದು ತಾಮ್ರಪತ್ರಗಳಿದ್ದು, ಐದೂ ಪತ್ರಗಳು ಇದ್ದು, ಐದೂ ಪತ್ರಗಳು ಮುಂಭಾಗ ಮತ್ತು ಹಿಂಭಾಗದಿಂದ ಕೂಡಿವೆ. ಒಟ್ಟು ಮೂರು ತಾಮ್ರಶಾಸನಗಳಲ್ಲಿ 583 ಸಾಲುಗಳಿವೆ.
ಮೊದಲನೇ ತಾಮ್ರಶಾಸನದ ಮೊದಲ ಪತ್ರದಲ್ಲಿ ಮುಂಭಾಗದಲ್ಲಿ 16 ಸಾಲುಗಳೂ, ಹಿಂಭಾಗದಲ್ಲಿ 18 ಸಾಲುಗಳಿವೆ. ಎರಡನೇ ಪತ್ರದಲ್ಲಿ ಮುಂಭಾಗದಲ್ಲಿ 20 ಸಾಲುಗಳಿದ್ದರೆ, ಹಿಂಭಾಗದಲ್ಲಿ 24 ಸಾಲುಗಳಿವೆ. ಮೂರನೇ ತಾಮ್ರಪತ್ರದ ಮುಂಭಾಗದಲ್ಲಿ 09 ಸಾಲುಗಳು ಮಾತ್ರ ಇವೆ.
ಎರಡನೇ ತಾಮ್ರಶಾಸನದ ಮೊದಲ ಪತ್ರದಲ್ಲಿ ಮುಂಭಾಗದಲ್ಲಿ 20 ಸಾಲುಗಳಿದ್ದರೆ, ಹಿಂಭಾಗವು 28 ಸಾಲುಗಳಿವೆ. ಎರಡನೇ ಪತ್ರವು ಮುಂಭಾಗದಲ್ಲಿ 35 ಸಾಲುಗಳಿಂದ ಕೂಡಿದ್ದರೆ, ಹಿಂಭಾಗದಲ್ಲಿ 37 ಸಾಲುಗಳಿವೆ. ಮೂರನೇ ಪತ್ರವು ಮುಂಭಾಗದಲ್ಲಿ 38 ಸಾಲುಗಳಿಂದ ಕೂಡಿದ್ದರೆ, ಹಿಂಭಾಗವು 41 ಸಾಲುಗಳಿಂದ ಇಡುಕಿರಿದಿದೆ.

ನಾಲ್ಕನೇ ಪತ್ರದಲ್ಲಿ ಮುಂಭಾಗವು 46 ಸಾಲುಗಳಿಂದಲೂ, ಹಿಂಭಾಗವು 16 ಸಾಲುಗಳಿಂದ ಕೂಡಿವೆ.

ಮೂರನೇ ತಾಮ್ರಶಾಸನದಲ್ಲಿ ಮೊದಲ ಪತ್ರದಲ್ಲಿ ಮುಂಭಾಗವು ತ್ರುಟಿತಗೊಂಡ 41 ಸಾಲುಗಳಿಂದಲೂ, ಹಿಂಭಾಗವು ತ್ರುಟಿತಗೊಂಡ 33 ಸಾಲುಗಳಿಂದ ಅಡಕವಾಗಿದೆ. ಎರಡನೇ ತಾಮ್ರಪತ್ರದಲ್ಲಿ ಮುಂಭಾಗವು 29 ಸಾಲುಗಳಿಂದಲೂ, ಹಿಂಭಾಗವು 24 ಸಾಲುಗಳಿಂದ ಕೂಡಿವೆ.

ಚಾರಿತ್ರಿಕ ಮತ್ತು ಸಾಂಸ್ಕೃತಿಕ ಮಹತ್ವವುಳ್ಳ ಸಾಮಾಜಿಕ ಕ್ರಾಂತಿಗೆ ಆಹ್ವಾನ ನೀಡಿದ ಬಿಜ್ಜಳನ ರಾಜಧಾನಿಯಾದ ಕಲ್ಯಾಣದ ಮಹಾತ್ಮೆಯನ್ನು ತುರುವೇಕೆರೆಯ ಎರಡನೇತಾಮ್ರಶಾಸನದ ಮೂರನೇ ಪತ್ರದ ಮುಂಭಾಗದಲ್ಲಿ 38 ಸಾಲುಗಳಿಂದಲೂ, ಹಿಂಭಾಗದ 41 ಸಾಲುಗಳಿಂದಲೂ ವರ್ಣಿತವಾದ 79 ಸಾಲುಗಳಿವೆ. ತುರುವೇಕೆರೆಯ ತಾಮ್ರಶಾಸನಗಳು ಒಡೆಯರು, ಭಕ್ತರು ಮೊದಲಗೊಂಡು ಸೆಟ್ಟಿ ಪಟ್ಟಣ ಸ್ವಾಮಿಗಳು ಬರೆಸಿಕೊಟ್ಟ ಶಾಶ್ವತವೆನಿಸಬಹುದಾದ ಶಾಸನಗಳಾಗಿವೆ. ಇದರಲ್ಲಿ ಕಲ್ಯಾಣವು ಪಡೆದಿರಬಹುದಾದ ಹೆಸರುಗಳ ಉಲ್ಲೇಖವನ್ನು ಈ ಶಾಸನವು ನಮಗೆ ತಿಳಿಸುತ್ತದೆ.

ಅನಂತ ಎಂಬ ಯುಗದಲ್ಲಿ ಬಸವಣ್ಣನು ಆದಿಮಹೇಶ್ವರನೆಂಬ ಭಕ್ತನಾಗಿ ಗೌರವಕ್ಕೆ ಪಾತ್ರನಾಗಿ ದೇವರು ಅನಾದಿಯೆಂಬ ಜಂಗಮರೂಪಿಯಾಗಿ ಬಂದು ಲಿಂಗಾರ್ಚನೆ ಮಾಡುವಾಗ ಅಂದಿನ ಯುಗದಲ್ಲಿ ಕಲ್ಯಾಣಕ್ಕೆ 'ಅಭಯಪುರ' ಎಂಬ ಅಭಿದಾನವು ಪ್ರಾಪ್ತವಾಗಿತ್ತು.

ಅಧ್ಯುಕ ಎಂಬ ಯುಗದಲ್ಲಿ ಬಸವಣ್ಣನು ನಾದಮೂರ್ತಿಯಾಗಿ ಗೌರವಾದರಗಳಿಂದ ಪೂಜ್ಯನೀಯನಾಗಿದ್ದಾನೆ. ನಾದಮೂರ್ತಿಯು ನಿರಾಳ ಎಂಬ ಜಂಗಮರೂಪವನ್ನು ಧರಿಸಿ ಶಿವೋಪಾಸನೆಯನ್ನು ಮಾಡುವಾಗ ಈ ಯುಗದಲ್ಲಿ 'ಸ್ವಯಂಪುರ' ಎಂಬ ಹೆಸರನ್ನು ಕಲ್ಯಾಣವನ್ನು ಪಡೆದಿತ್ತು.

ತಮಂಧ ಎಂಬ ಯುಗದಲ್ಲಿ ಬಸವಣ್ಣನು ಸದಾಚಾರಿ ಎಂಬ ಭಕ್ತನಾಗಿದ್ದು ಆಚಾರಿ ಎಂಬ ಜಂಗಮರೂಪಿಯಾಗಿ ಬಂದು ಖಟ್ವಾಂಗಧರನ ಪೂಜೆ ಮಾಡುವಾಗ 'ಮನ್ಮಥಪುರ' ಎಂಬ ಅಭಿಧಾನವನ್ನು ಪಡೆದಿತ್ತು.

ಕಡಂಜ ಎಂಬ ಯುಗದಲ್ಲಿ ಬಸವಣ್ಣನು ನೀಲಕಂಠ ಎಂಬ ಭಕ್ತನಾಗಿ ಗೌರವಿಸುವಾಗ ಅನುವಿಸಿ ಎಂಬ ಜಂಗಮರೂಪವನ್ನು ತಾಳಿ ಖಂಡೇಂದುಧರನ ಪೂಜೆ ಮಾಡುವಾಗ 'ನಂದಾಪುರ' ಎಂಬ ಹೆಸರು ಪ್ರಾಪ್ತವಾಗಿತ್ತು.

ಬಿಂನಜ ಎಂಬ ಯುಗದಲ್ಲಿ ಬಸವಣ್ಣ ದೇವರು ಸಂಕಾಶಿಕಾ ಎಂಬ ಭಕ್ತನಾಗಿ ಆದರಗಳಿಂದ ಪೂಜಗೈವಾಗ ಕ್ರೋಧಮೂರ್ತಿ ಎಂಬ ಜಂಗಮರೂಪಿಯಾಗಿ ಬಂದು ಈಶ್ವರನ ಉಪಾಸನೆ ಮಾಡುವಾಗ 'ನಾರಾಯಣಪುರ' ಎಂಬ ಅಭಿದಾನವು ಕಲ್ಯಾಣಕ್ಕೆ ದೊರಯುತ್ತದೆ.

ಬಿನಾಯುಕ್ತ ಎಂಬ ಯುಗದಲ್ಲಿ ಬಸವಣ್ಣನವರು ಸಮಂತ ಎಂಬ ಭಕ್ತನ ಹೆಸರನ್ನು ಪಡೆದು ಸ್ವಯಂಭು ಎಂಬ ಜಂಗಮರೂಪಿಯಾಗಿ ಶಿವಪೂಜೆ ಮಾಡುವಾಗ ಅಂದು ಕಲ್ಯಾಣದ ಹೆಸರು 'ವಿಮಳಾಪುರ' ಎಂದಾಗಿತ್ತು.

ಮಭ್ಯುಕ್ತ ಎಂಬ ಯುಗದಲ್ಲಿ ಬಸವಣ್ಣನು ವೃಷಭಕಂದರ ಎಂಬ ಭಕ್ತನಾಗಿ ವಿಮಲಲೋಚನ ಎಂಬ ಜಂಗಮರೂಪಿಯಾಗಿ ಶಿವಪೂಜೆ ಮಾಡುವಾಗ 'ಸಿದ್ಧಾಪುರ' ಎಂಬ ಅಭಿದಾನವು ದೊರೆಯಿತು.

ಮಂನ್ಯ ಎಂಬ ಯುಗದಲ್ಲಿ ಬಸವೀದೇವನು ವಿಶ್ವಸ ಎಂಬ ಭಕ್ತನಾಗಿ ಗೌರವಾದರಕ್ಕೆ ಪಾತ್ರವಾಗಿದ್ದನು. ಸಸಿಧರ ಎಂಬ ಜಂಗಮರೂಪಿಯಾಗಿ ಬಂದುಮುಕ್ಕಣ್ಣನ ಪೂಜೆ ಮಾಡುವಾಗ ಕಲ್ಯಾಣಕ್ಕೆ 'ಸರಸ್ವತಿಪುರ' ಎಂಬ ಹೆಸರಿನಲ್ಲಿ ಪ್ರಸಿದ್ದವಾಗಿತ್ತು.

ಅಲಂಕೃತ ಎಂಬ ಯುಗದಲ್ಲಿ ಬಸವರಾಜದೇವರು ಯಕಾಂಕಾರ ಎಂಬ ಭಕ್ತನಾಗಿ ಮಾನ್ಯನಾಗಿರುವಾಗ ನಿತ್ಯಾ ಎಂಬ ಜಂಗಮ ವೇಷಿಯಾಗಿ ಶಶಿಧರನ ಪೂಜೆ ಮಾಡುವಾಗ 'ನೀಲಕಂಠಪುರ'ವೆಂದು ಕಲ್ಯಾಣವನ್ನು ಕರೆಯಲಾಗುತ್ತಿತ್ತು.

ವಿಶ್ವಾವಸು ಎಂಬ ಯುಗದಲ್ಲಿ ಬಸವಣ್ಣನು ಯೆಕಾಗ್ರ ಎಂಬ ಭಕ್ತನಾಗಿ ಪೂಜ್ಯನೀಯನಾಗಿದ್ದನು. ಸುಚಿತ್ತನೆಂಬ ಜಂಗಮವೇಷಿಯಾಗಿ ಶಿವೋಪಾಸನೆ ಮಾಡುವಾಗ 'ತ್ರಿಪುರಾಂತಕಪುರ' ಎಂದು ಕಲ್ಯಾಣವನ್ನು ಕರೆಯಲಾಗುತ್ತದೆ.

ಮ್ಯಾಬಾಕ್ತ ಎಂಬ ಯುಗದಲ್ಲಿ ಬಸವೀದೇವನು ಸಂಪಂನ ಎಂಬ ಭಕ್ತನಾಗಿ ಆದರಿಸುವಾಗ ಯೀಶ್ವರ ಎಂಬ ಜಂಗಮರೂಪದಲ್ಲಿ ಬಂದು ಮಹೇಶ್ವರನ ಪೂಜಮಾಡುವಾಗ 'ಅಮೃತಾಪುರ' ಎಂಬ ಅಭಿಧಾನವಿತ್ತು.

ಮನ್ಯರಣ ಎಂಬ ಯುಗದಲ್ಲಿ ಬಸವೇಶ್ವರರು ಮಹಾಮಹೇಶ್ವರ ಎಂಬ ಭಕ್ತನಾಗಿದ್ದುಕೊಂಡು ಶಿವಪೂಜೆ ಮಾಡುವಾಗ ಶಡ್ಗರು ಎಂಬ ಜಂಗಮ ರೂಪದಲ್ಲಿ ತ್ರಿಪುರಾಂತಕನ ಪೂಜೆ ಸಲ್ಲಿಸುವಾಗ ಕಲ್ಯಾಣಕ್ಕೆ 'ಮಾಯಾಪುರ' ವೆಂದು ಹೆಸರಾಯಿತು.

ಕೃತಯುಗ ಎಂಬಲ್ಲಿ ಬಸವಣ್ಣನು ದೇವಾಂಗ ಎಂಬ ಭಕ್ತನಾಗಿ ಗೌರವಿಸುವಾಗ ನೀಲಕಂಠ ಎಂಬ ಜಂಗಮರೂಪದಲ್ಲಿ ಮಹೇಶ್ವರನ ಪೂಜೆ ಸಲ್ಲಿಸುವಾಗ 'ಅಂದಾಪುರ' ಎಂಬ ಹೆಸರಾಯಿತು.

ತ್ರೇತಾಯುಗದಲ್ಲಿ ಬಸವೀದೇವನು ಮಾರ್ಕಂಡ ಎಂಬ ಭಕ್ತನಾಗಿರುವಾಗ ಅಮರೇಶ್ವರ ಎಂಬ ಜಂಗಮವೇಷದಲ್ಲಿ ಮಹೇಶ್ವರ ಪೂಜೆಗೈವಾಗ 'ನಂದಾಪುರ' ಎಂಬ ಹೆಸರು ಪ್ರಾಪ್ತವಾಯಿತು.

ದ್ವಾಪರಯುಗದಲ್ಲಿ ಬಸವಣ್ಣನು ವೃಷಭ ಎಂಬ ಭಕ್ತನಾಗಿ ಮಾನ್ಯನಾಗಿರುವಾಗ ಮಾಯಾಕೋಳಾಹಳ ಎಂಬ ಜಂಗಮರೂಪದಲ್ಲಿ ಶಿವಪೂಜೆ ಮಾಡುವಾಗ 'ಆದಿಪುರ' ಎಂದು ಕಲ್ಯಾಣಕ್ಕೆ ಹೆಸರಾಗಿದೆ.

ಕಲಿಯುಗದಲ್ಲಿ ಬಸವಣ್ಣನು ಬಿಜ್ಜಳನ ಆಸ್ಥಾನದಲ್ಲಿ ಭಕ್ತಿ ಭಂಡಾರಿಯಾಗಿ ಪೂಜ್ಯನಿರುವಾಗ ಅಲ್ಲಮಪ್ರಭುವು ಅನುಭವ ಮಂಟಪದ ಅಧ್ಯಕ್ಷನಾಗಿದ್ದುಕೊಂಡು ಜಂಗಮರೂಪ ತಾಳಿ ಅಂದಿನಿಂದ ಕರೆಯುತ್ತಿದ್ದ ಹೆಸರುಗಳ ಜೊತೆಗೆ 'ಕಲ್ಯಾಣ (ಬಸವಕಲ್ಯಾಣ)' ಎಂಬ ಹೆಸರು ಪ್ರಾಪ್ತವಾಗಿ ಕರ್ನಾಟಕದ ಸಾಂಸ್ಕೃತಿಕ ಚರಿತೆಯ ಪುಟಗಳಲ್ಲಿ ಉಳಿದಿರುವ ಕಲ್ಯಾಣವಾಗಿದೆಯೆಂದು ತುರುವೇಕೆರೆಯ ತಾಮ್ರಶಾಸನದಲ್ಲಿ ಕಲ್ಯಾಣಮಹಾತ್ಮೆಯು ಪ್ರಸ್ತಾಪಿತವಾಗಿದೆ.

## ಉಪಸಂಹಾರ/ಕೊನೆಯ ಮಾತು

ಮೇಲಿನ ಕಲ್ಯಾಣದ ಮಹತ್ವವನ್ನು ಅವಲೋಕಿಸಿದರೆ ವಿವಿಧ ಯುಗದಲ್ಲಿ ಕಲ್ಯಾಣ ಪಡೆದುಕೊಂಡ ಹೆಸರುಗಳು ಬಸವಣ್ಣನ ಅಭಿದಾನಗಳು ಮತ್ತು ತಾಳಿದ ಜಂಗಮತ್ವ ರೂಪಗಳಿಗೂ ಅವಿನಾಭಾವ ಸಂಬಂಧವಿರುವುದ ಮನವರಿಕೆಯಾಗುತ್ತದೆ. ಇದರೊಂದಿಗೆ ಪಟ್ಟಣವೊಂದು ಪಡೆದುಕೊಳ್ಳುವ ಆಧ್ಯಾತ್ಮಿಕತೆಯೂ ಅರಿವಿಗೆ ಬರುತ್ತದೆ.

## ಗ್ರಂಥಋಣ


1. ತಗರಪವಾಡ (ಸಂ) ಡಾ.ಎಂ.ಎಂ.ಕಲಬುರ್ಗಿ,ಸಿ.ಕೆ.ಪರಶುರಾಮಯ್ಯ,ಡಾ.ಎಫ್.ಟಿ.ಹಳ್ಳಿಕೇರಿ